# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** 2013-14ನೇ ಸಾಲಿನ ಶಾಸನಬದ್ಧ ಅನುದಾನದ ನಾಲ್ಕನೇ ತ್ರೈಮಾಸಿಕ ಕಂತನ್ನು ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**
1) ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 129 ಗ್ರಾಪಂಕಾ 2002 (3), ದಿನಾಂಕ: 2-12-2003.
2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 234 ಗ್ರಾಪಂಅ 2007, ದಿನಾಂಕ: 27-3-2008.
3) ಆರ್ಥಿಕ ಇಲಾಖೆ ಅ.ಟಿ.ಸಂಖ್ಯೆ: ಆಇ 233 ವೆಚ್ಚ-6/2013, ದಿನಾಂಕ: 22-05-2013.
4) ಇದೇ ಸಮ ಸಂಖ್ಯೆಯ ಸರ್ಕಾರದ ಆದೇಶ ದಿನಾಂಕ: 27-05-2013.
5) ಆರ್ಥಿಕ ಇಲಾಖೆ ಅ.ಟಿ.ಸಂಖ್ಯೆ: ಆಇ 233 ವೆಚ್ಚ-6/2013, ದಿನಾಂಕ: 06-09-2013.
6) ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 23 ಗ್ರಾಪಂಅ 2013, ದಿನಾಂಕ: 19.09.2013.
7) ಇದೇ ಸಮ ಸಂಖ್ಯೆಯ ಸರ್ಕಾರದ ಆದೇಶ ದಿನಾಂಕ: 19-09-2013.
8) ಆರ್ಥಿಕ ಇಲಾಖೆ ಅ.ಟಿ.ಸಂಖ್ಯೆ: ಆಇ 233 ವೆಚ್ಚ-6/2013, ದಿನಾಂಕ: 30-10-2013.
9) ಇದೇ ಸಮ ಸಂಖ್ಯೆಯ ಸರ್ಕಾರದ ಆದೇಶ ದಿನಾಂಕ: 31-10-2013.
10) ಆರ್ಥಿಕ ಇಲಾಖೆ ಅ.ಟಿ.ಸಂಖ್ಯೆ: ಆಇ 233 ವೆಚ್ಚ-6/2013, ದಿನಾಂಕ: 30-01-2014.

## ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಆದೇಶದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವ ಸರ್ಕಾರದ ಅನುದಾನವನ್ನು ರಾಜ್ಯ ಹುಜೂರು ಖಜಾನೆಯಿಂದ ಪೇಯೀಸ್ ರಸೀದಿ ಮೇಲೆ ಪಡೆದು ರಾಷ್ಟ್ರೀಯ ಬ್ಯಾಂಕುಗಳ ಮುಖಾಂತರ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲು ಸರ್ಕಾರದ ಅಧೀನ ಕಾರ್ಯದರ್ಶಿ (ಜಿ.ಪಂ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರಿಗೆ ಸರ್ಕಾರವು ಅಧಿಕರಿಸಿದೆ.

2013-14ನೇ ಸಾಲಿಗೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಶಾಸನಬದ್ಧ ಅನುದಾನಕ್ಕಾಗಿ ಆಯವ್ಯಯ ಲೆಕ್ಕ ಶೀರ್ಷಿಕೆ **2515-00-198-1-07 (ಯೋಜನೆ)** ಅಡಿ ಒಟ್ಟಾರೆ ರೂ. 59126.00 ಲಕ್ಷ (ಐವತ್ತೊಂಭತ್ತು ಸಾವಿರದ ಒಂದು ನೂರಾ ಇಪ್ಪತ್ತಾರು ಲಕ್ಷ ರೂಪಾಯಿಗಳು) ಗಳನ್ನು ಒದಗಿಸಲಾಗಿದೆ. ಈ ಅನುದಾನದಿಂದ ಪ್ರಸಕ್ತ ಆರ್ಥಿಕ ವರ್ಷದ ಮೊದಲನೇ ತ್ರೈಮಾಸಿಕ ಕಂತಿನ ಅನುದಾನವನ್ನು ಉಲ್ಲೇಖ (4) ರ ಆದೇಶದಲ್ಲಿ ಮತ್ತು ಮೊದಲನೇ ತ್ರೈಮಾಸಿಕ ಕಂತಿನ ಅನುದಾನದ ವ್ಯತ್ಯಾಸದ ಮೊತ್ತ ಮತ್ತು ಎರಡನೇ ತ್ರೈಮಾಸಿಕ ಕಂತಿನ ಅನುದಾನವನ್ನು ಉಲ್ಲೇಖ (7) ರ ಆದೇಶದಲ್ಲಿ ಬಿಡುಗಡೆ ಮಾಡಲಾಗಿದೆ. 2011 ರ ಜನಗಣತಿಯನ್ವಯ ಎಂಟು ಸಾವಿರಕ್ಕಿಂತ (8001 ಮತ್ತು ಮೇಲ್ಪಟ್ಟು) ಹೆಚ್ಚಿನ ಜನಸಂಖ್ಯೆ ಇರುವ 1418 ಗ್ರಾಮ ಪಂಚಾಯಿತಿಗಳಿಗೆ ಪ್ರತಿ ಗ್ರಾಮ ಪಂಚಾಯಿತಿಗೆ ವಾರ್ಷಿಕವಾಗಿ ತಲಾ ರೂ. 12.00 ಲಕ್ಷಗಳು ಹಾಗೂ ಎಂಟು ಸಾವಿರ ಮತ್ತು ಅದಕ್ಕಿಂತ ಕಡಿಮೆ ಜನಸಂಖ್ಯೆ ಇರುವ 4211 ಗ್ರಾಮ ಪಂಚಾಯಿತಿಗಳಿಗೆ ಪ್ರತಿ ಗ್ರಾಮ ಪಂಚಾಯಿತಿಗೆ ವಾರ್ಷಿಕವಾಗಿ ತಲಾ ರೂ. 10.00 ಲಕ್ಷಗಳನ್ನು ನೀಡಬೇಕಾಗಿರುತ್ತದೆ. ಆದ್ದರಿಂದ 1418 ಗ್ರಾಮ ಪಂಚಾಯಿತಿಗಳಿಗೆ ಮೂರನೇ ತ್ರೈಮಾಸಿಕ ಕಂತಿನ ಅನುದಾನದ ಮೊತ್ತ ತಲಾ ರೂ. 3.00 ಲಕ್ಷದಂತೆ ಒಟ್ಟು ರೂ. 4254.00 ಲಕ್ಷಗಳು (ನಾಲ್ಕು ಸಾವಿರದ ಎರಡು ನೂರಾ ಐವತ್ತನಾಲ್ಕು ಲಕ್ಷಗಳು ಮಾತ್ರ) ಹಾಗೂ 4211 ಗ್ರಾಮ ಪಂಚಾಯಿತಿಗಳಿಗೆ ತಲಾ ರೂ. 2.50 ಲಕ್ಷದಂತೆ ಒಟ್ಟು ರೂ. 10527.50 ಲಕ್ಷಗಳ (ಹತ್ತು ಸಾವಿರದ ಐದು ನೂರಾ ಇಪ್ಪತ್ತೇಳು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಅನುದಾನವನ್ನು ಬಿಡುಗಡೆ ಮಾಡಲು ಪರಿಶೀಲಿಸಲಾಗಿದ್ದು, ಅದರಂತೆ ಆರ್ಥಿಕ ಇಲಾಖೆಯು ಮೇಲೆ ಓದಲಾದ ಕ್ರಮ ಸಂಖ್ಯೆ (8) ರಲ್ಲಿನ ಸಹಮತಿಯಂತೆ 5629 ಗ್ರಾಮ ಪಂಚಾಯಿತಿಗಳಿಗೆ ರೂ. 14781.50 ಲಕ್ಷಗಳು (ಹದಿನಾಲ್ಕು ಸಾವಿರದ ಏಳುನೂರಾ ಎಂಬತ್ತೊಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಸರ್ಕಾರದ ಉಲ್ಲೇಖ (9) ರ ಆದೇಶದಲ್ಲಿ ಬಿಡುಗಡೆ ಮಾಡಲಾಗಿದೆ. 2013-14 ನೇ

ಸಾಲಿನ 4ನೇ ಕಂತಿನ ಶಾಸನಬದ್ಧ ಅನುದಾನವನ್ನು ಬಿಡುಗಡೆ ಮಾಡಲು ಆರ್ಥಿಕ ಇಲಾಖೆ ಮೇಲೆ ಓದಲಾದ (10) ರಲ್ಲಿನ ಸಹಮತಿಯಂತೆ 5629 ಗ್ರಾಮ ಪಂಚಾಯಿತಿಗಳಿಗೆ ರೂ.14788.50 ಲಕ್ಷ (ಹದಿನಾಲ್ಕು ಸಾವಿರದ ಏಳು - ನೂರಾ ಎಂಭತ್ತೆಂಟು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಬಿಡುಗಡೆ ಮಾಡಬೇಕಾಗಿದೆ.

ಸದರಿ ಅನುದಾನದ ಪೈಕಿ ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಸರ್ಕಾರದ ಆದೇಶದಂತೆ, ಗ್ರಾಮ ಪಂಚಾಯಿತಿ ಸಿಬ್ಬಂದಿ ವೇತನಕ್ಕಾಗಿ ಶೇಕಡಾ 40 ರಷ್ಟು ಅನುದಾನವನ್ನು ಮತ್ತು ಉಳಿದ ಶೇಕಡಾ 60 ರಷ್ಟನ್ನು ಗ್ರಾಮ ಪಂಚಾಯಿತಿಗಳ ಜನವರಿ 2014 ರಿಂದ ಮಾರ್ಚ್ 2014 ರ ಅವಧಿಯ ವಿದ್ಯುತ್ ಬಿಲ್ ಪಾವತಿಸಲು ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 23 ಗ್ರಾಪಂಅ 2013,**
**ಬೆಂಗಳೂರು, ದಿನಾಂಕ: 14-02-2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2013-14ನೇ ಸಾಲಿನ ಶಾಸನಬದ್ಧ ಅನುದಾನದ ನಾಲ್ಕನೇ ತ್ರೈಮಾಸಿಕ ಕಂತಿನ ಮೊತ್ತ ರೂ. 14781.50 ಲಕ್ಷಗಳು (ಹದಿನಾಲ್ಕು ಸಾವಿರದ ಏಳುನೂರಾ ಎಂಬತ್ತೊಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು 2013-14 ನೇ ಸಾಲಿನ ಲೆಕ್ಕ ಶೀರ್ಷಿಕೆ **2515-00-198-1-07 (ಯೋಜನೆ)** ಅಡಿಯಲ್ಲಿ 5629 ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

ಈ ಅನುದಾನದ ಮೊತ್ತವನ್ನು ಪೇಯೀಸ್ ರಸೀದಿಯ ಮೇಲೆ ಪಡೆದು ಸಿಂಡಿಕೇಟ್ ಬ್ಯಾಂಕ್, ಬೆಂಗಳೂರು ನಗರ ನೀರು ಸರಬರಾಜು ಮಂಡಳಿ ಶಾಖೆ, ಮೈಸೂರು ಬ್ಯಾಂಕ್ ವೃತ್ತ, ಬೆಂಗಳೂರು ಇಲ್ಲಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಉಳಿತಾಯ ಸಂಖ್ಯೆ 04462010088409 ಮುಖಾಂತರ ರಾಜ್ಯದಲ್ಲಿನ 2011 ರ ಜನಗಣತಿಯಂತೆ ಎಂಟು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ತಲಾ ರೂ. 3,00,000.00 (ಮೂರು ಲಕ್ಷ ರೂಪಾಯಿಗಳು ಮಾತ್ರ) ಮತ್ತು 2011 ರ ಜನಗಣತಿಯಂತೆ ಎಂಟು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ತಲಾ ರೂ. 2,50,000.00 (ಎರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಗಳಂತೆ ಅನುದಾನವನ್ನು ಈ ಕೆಳಕಂಡ ಮಾದರಿಯಲ್ಲಿ 5629 ಗ್ರಾಮ ಪಂಚಾಯಿತಿಗಳಿಗೆ **ಅನುಬಂಧ-1** ರಲ್ಲಿರುವಂತೆ ಜಿಲ್ಲಾವಾರು ಬಿಡುಗಡೆ ಮಾಡಿದೆ ಮತ್ತು ಗ್ರಾಮ ಪಂಚಾಯಿತಿವಾರು ಬಿಡುಗಡೆ ಮಾಡಿರುವ ಅನುದಾನದ ವಿವರವನ್ನು **ಅನುಬಂಧ-2** ರಲ್ಲಿ ನೀಡಿದೆ.

1. ಎಂಟು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಪ್ರತಿ ಗ್ರಾಮ ಪಂಚಾಯಿತಿಗೆ ಬಿಡುಗಡೆ ಮಾಡಿರುವ ರೂ. 3,00,000.00 (ಮೂರು ಲಕ್ಷ ರೂಪಾಯಿಗಳು ಮಾತ್ರ) ಅನುದಾನದ ಪೈಕಿ ಶೇಕಡಾ 60 ರಷ್ಟು ಅಂದರೆ ರೂ. 1,80,000.00 (ಒಂದು ಲಕ್ಷದ ಎಂಭತ್ತು ಸಾವಿರ ರೂಪಾಯಿಗಳು ಮಾತ್ರ) ನ್ನು ಮತ್ತು ಎಂಟು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪ್ರತಿ ಗ್ರಾಮ ಪಂಚಾಯಿತಿಗೆ ಬಿಡುಗಡೆ ಮಾಡಿರುವ ರೂ. 2,50,000.00 (ಎರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಅನುದಾನದ ಪೈಕಿ ಶೇಕಡಾ 60 ರಷ್ಟು ಅಂದರೆ ರೂ. 1,50,000.00 (ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ನ್ನು ಜನವರಿ 2014 ರಿಂದ ಮಾರ್ಚ್ 2014 ರ ಅವಧಿಯ ವಿದ್ಯುತ್ ಬಿಲ್ ಪಾವತಿಸುವ ಸಲುವಾಗಿ ಮೇಲ್ಕಂಡ ಸಿಂಡಿಕೇಟ್ ಬ್ಯಾಂಕಿನಿಂದ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಬ್ಯಾಂಕ್ ಖಾತೆಯ ನಂಬರ್‌ಗಳಿಗೆ ಆನ್‌ಲೈನ್ ಮುಖಾಂತರ ವರ್ಗಾಯಿಸಲು ಆದೇಶಿಸಿದೆ.
2. ಎಂಟು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಗ್ರಾಮ ಪಂಚಾಯಿತಿಗಳು ಮತ್ತು ಎಂಟು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಗ್ರಾಮ ಪಂಚಾಯಿತಿಗಳು ಶೇಕಡಾ 40 ರಷ್ಟು ಅನುದಾನವನ್ನು ಅಂದರೆ ಕ್ರಮವಾಗಿ ರೂ. 1,20,000.00 (ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಮತ್ತು ರೂ. 1,00,000.00 (ಒಂದು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಮಾತ್ರ ಸಿಬ್ಬಂದಿ ವೇತನಕ್ಕಾಗಿ ಮೇಲ್ಕಂಡ ಸಿಂಡಿಕೇಟ್ ಬ್ಯಾಂಕ್‌ನಿಂದ ನೇರವಾಗಿ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಬ್ಯಾಂಕ್ ಖಾತೆಯ ನಂಬರ್‌ಗಳಿಗೆ ಆನ್‌ಲೈನ್ ಮುಖಾಂತರ ವರ್ಗಾಯಿಸಲು ಆದೇಶಿಸಿದೆ.

ಮೇಲ್ಕಂಡ ಉದ್ದೇಶಗಳಿಗಲ್ಲದೇ ಈ ಅನುದಾನವನ್ನು ಜಿಲ್ಲಾ ಪಂಚಾಯಿತಿ/ಗ್ರಾಮ ಪಂಚಾಯಿತಿಗಳು ಬೇರೆ ಯಾವುದೇ ಉದ್ದೇಶಕ್ಕೆ ವಿನಿಯೋಗಿಸತಕ್ಕದ್ದಲ್ಲ ಹಾಗೂ ಜಿಲ್ಲಾ ಪಂಚಾಯಿತಿಗಳು ವಿದ್ಯುತ್ ಬಿಲ್ ಪಾವತಿಸಲು ಬಿಡುಗಡೆ ಮಾಡಿರುವ ಅನುದಾನದ ವಿವರವನ್ನು ದಿನಾಂಕ: **01-03-2014** ರೊಳಗಾಗಿ ಸರ್ಕಾರಕ್ಕೆ ಕಳುಹಿಸತಕ್ಕದ್ದು.

ಹಲವಾರು ಜಿಲ್ಲಾ ಪಂಚಾಯಿತಿಗಳು ಗ್ರಾಮ ಪಂಚಾಯಿತಿಗಳಿಗೆ ನೀಡಬೇಕಾದ ಶೇಕಡಾ 40ರಷ್ಟು ಅನುದಾನವನ್ನು ಕಳೆದ ವರ್ಷ ಬಿಡುಗಡೆ ಮಾಡುವಲ್ಲಿ 15 ದಿನಗಳಿಂದ 3–4 ತಿಂಗಳುಗಳವರೆಗೆ ವಿಳಂಬ ಮಾಡುತ್ತಿರುವುದು ಮತ್ತು ಈ ಅನುದಾನವನ್ನು ಚೆಕ್ ಅಥವಾ ಡಿ.ಡಿ. ಮುಖಾಂತರ ನೀಡುತ್ತಿರುವುದು ಹಾಗೂ ಕೆಲವು ಜಿಲ್ಲೆಗಳಲ್ಲಿ ಈ ಅನುದಾನದ ಚೆಕ್/ಡಿ.ಡಿ.ಗಳನ್ನು ತಾಲ್ಲೂಕು ಪಂಚಾಯಿತಿ ವಶಕ್ಕೆ ನೀಡಿ ನಂತರ ತಾಲ್ಲೂಕು ಪಂಚಾಯಿತಿಗಳಿಂದ ಗ್ರಾಮ ಪಂಚಾಯಿತಿಗಳಿಗೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದುದರಿಂದ ಈ ಅನುದಾನದ ಮೊತ್ತವು ಸಿಂಡಿಕೇಟ್ ಬ್ಯಾಂಕ್ ಮುಖಾಂತರ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಬ್ಯಾಂಕ್ ಖಾತೆಗೆ ಆನ್–ಲೈನ್ ಮುಖಾಂತರ ಜಮೆಯಾದ ದಿನಾಂಕದಿಂದ 2 (ಎರಡು) ದಿನಗಳೊಳಗೆ ಸಂಬಂಧಪಟ್ಟ ಎಲ್ಲಾ ಗ್ರಾಮ ಪಂಚಾಯಿತಿಯ ಖಾತೆಗೆ ಆನ್–ಲೈನ್ ಮುಖಾಂತರ ಜಮಾ ಆಗಿರಕ್ಕದ್ದು. ಯಾವುದೇ ಕಾರಣಕ್ಕೂ ಚೆಕ್ ಅಥವಾ ಡಿ.ಡಿ. ನೀಡತಕ್ಕದ್ದಲ್ಲ. ಅನುದಾನ ಬಿಡುಗಡೆ ಆದೇಶ ಮತ್ತು ಅನುದಾನವನ್ನು ಗ್ರಾಮ ಪಂಚಾಯಿತಿಗಳಿಗೆ ಆನ್–ಲೈನ್ ಮುಖಾಂತರ ವರ್ಗಾಯಿಸಿರುವ ದಿನಾಂಕದ ಮಾಹಿತಿಯನ್ನು ಮತ್ತು ಸದರಿ ಗ್ರಾಮ ಪಂಚಾಯಿತಿ ಖಾತೆಗಳಲ್ಲಿ ಜಮಾ ಆಗಿರುವ ದಿನಾಂಕವನ್ನು ಜಿಲ್ಲಾ ಪಂಚಾಯಿತಿ ವೆಬ್ ಸೈಟ್‌ನಲ್ಲಿ ಅಪ್ ಲೋಡ್ ಮಾಡತಕ್ಕದ್ದು. ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ಪ್ರತಿ ತಿಂಗಳ 5ನೇ ದಿನಾಂಕದೊಳಗೆ ವೇತನ ಪಾವತಿಸಲು ಕ್ರಮ ವಹಿಸಿ ವೇತನ ಪಾವತಿಸಿದ ವಿವರಗಳ ಮಾಹಿತಿಯನ್ನು ಪ್ರತಿ ತಿಂಗಳ 6ನೇ ದಿನಾಂಕದಂದು ಗ್ರಾಮ ಪಂಚಾಯಿತಿಗಳು ಪಂಚತಂತ್ರ ತಂತ್ರಾಂಶದಲ್ಲಿ ತಪ್ಪದೆ ಅಪ್ ಲೋಡ್ ಮಾಡತಕ್ಕದ್ದು. ಇದರಲ್ಲಿ ಯಾವುದೇ ಲೋಪವಾದಲ್ಲಿ ಸಂಬಂಧಪಟ್ಟವರಿಂದ ವಿಳಂಬದ ಅವಧಿಗೆ ಬಡ್ಡಿ ವಸೂಲಿ ಮಾಡಲು ಕ್ರಮ ವಹಿಸಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 233 ವೆಚ್ಚ–06/2013, ದಿನಾಂಕ: 30–01–2014 ರಲ್ಲಿ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

14/02/14

(ಎಲ್.ಸಿ. ಬಸವರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
(ದೂರವಾಣಿ ಸಂಖ್ಯೆ: 080–22032295)

ಇವರಿಗೆ:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ
3) ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು
4) ನಿರ್ದೇಶಕರು, ಎನ್.ಎಂ.ಸಿ. ಖಜಾನೆ ಇಲಾಖೆ, ಖನಿಜ ಭವನ, ಬೆಂಗಳೂರು.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ 30 ಜಿಲ್ಲಾ ಪಂಚಾಯಿತಿಗಳು
6) *ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯಿತಿಗಳು (ಸಂಬಂಧಪಟ್ಟ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಈ ಆದೇಶದ ಪ್ರತಿಯನ್ನು ಕಳುಹಿಸಲು ಕೋರಿದೆ).
7) ವ್ಯವಸ್ಥಾಪಕರು, ಸಿಂಡಿಕೇಟ್ ಬ್ಯಾಂಕ್, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಶಾಖೆ, ಅವೆನ್ಯೂ ರಸ್ತೆ, ಕಾವೇರಿ ಭವನದ ಮುಂಭಾಗ, ಬೆಂಗಳೂರು (ದೂರವಾಣಿ ಸಂಖ್ಯೆ: 080–22216450, 22215584)
8) ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
9) ಮಾಹಿತಿ ಕೇಂದ್ರ/ವೆಬ್ ಸೈಟ್, ಗ್ರಾ.ಅ.ಪ ಇಲಾಖೆ.

ಪ್ರತಿ:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿ (ಪಂ.ರಾಜ್), ಗ್ರಾಅಪ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.
2) ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ–6, ಆರ್ಥಿಕ ಇಲಾಖೆ, ವಿಧಾನಸೌಧ.
3) ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪ ಇಲಾಖೆ.

* ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಗೆ ಈ ಆದೇಶದ ಪ್ರತಿಯನ್ನು ತಲುಪಿಸುವ ವ್ಯವಸ್ಥೆ ಮಾಡುವಂತೆ ಸೂಚಿಸಲಾಗಿದೆ.

## ಅನುಬಂಧ-1

### 2013-14 ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿಗಳಿಗೆ ಮಂಜೂರು ಮಾಡಬೇಕಾಗಿರುವ 4ನೇ ತ್ರೈಮಾಸಿಕ ಕಂತಿನ ಶಾಸನಬದ್ಧ ಅನುದಾನದ ವಿವರ

| ಕ್ರ ಸಂ. | ಉಪ ಲೆಕ್ಕ ಶೀರ್ಷಿಕೆ | ಪಂಚಾಯಿತಿ | ಗ್ರಾಮ ಪಂಚಾಯಿತಿಗಳ ಸಂಖ್ಯೆ | | | ಬಿಡಿಗಡೆ ಮಾಡಬೇಕಾಗಿರುವ ಹಣ | | | ನಾಲ್ಕನೇ ತ್ರೈಮಾಸಿಕ ಅನುದಾನ (ರೂ.ಲಕ್ಷ ಗಳಲ್ಲಿ) |
|---|---|---|---|---|---|---|---|---|---|
| | | | 8001 ಜನಸಂಖ್ಯೆ ಮೇಲ್ಪಟ್ಟು | 8001 ಕ್ಕಿಂತ ಕಡಿಮೆ ಜನಸಂಖ್ಯೆ | ಒಟ್ಟು | ಪ್ರತಿ ಗ್ರಾಪಂಗೆ ರೂ.12.00 ಲಕ್ಷದಂತೆ | ಪ್ರತಿ ಗ್ರಾಪಂಗೆ ರೂ.10.00 ಲಕ್ಷದಂತೆ | ಒಟ್ಟು (ಲಕ್ಷಗಳಲ್ಲಿ) | |
| 1 | 2 | 3 | 4 | 5 | 6 | 7 | 8 | 9 | 10 |
| 1 | 401 | ಬೆಂಗಳೂರು ನ | 58 | 28 | 86 | 696.00 | 280.00 | 976.00 | 244.00 |
| 2 | 402 | ಬೆಂಗಳೂರು ಗ | 34 | 64 | 98 | 408.00 | 640.00 | 1048.00 | 262.00 |
| 3 | 403 | ಚಿತ್ರದುರ್ಗ | 55 | 130 | 185 | 660.00 | 1300.00 | 1960.00 | 490.00 |
| 4 | 404 | ಕೋಲಾರ | 23 | 133 | 156 | 276.00 | 1330.00 | 1606.00 | 401.50 |
| 5 | 405 | ಶಿವಮೊಗ್ಗ | 8 | 252 | 260 | 96.00 | 2520.00 | 2616.00 | 654.00 |
| 6 | 406 | ತುಮಕೂರು | 43 | 278 | 321 | 516.00 | 2780.00 | 3296.00 | 824.00 |
| 7 | 407 | ಮೈಸೂರು | 88 | 147 | 235 | 1056.00 | 1470.00 | 2526.00 | 631.50 |
| 8 | 408 | ಚಿಕ್ಕಮಗಳೂರು | 6 | 220 | 226 | 72.00 | 2200.00 | 2272.00 | 568.00 |
| 9 | 409 | ದಕ್ಷಿಣ ಕನ್ನಡ | 42 | 161 | 203 | 504.00 | 1610.00 | 2114.00 | 528.50 |
| 10 | 410 | ಹಾಸನ | 18 | 240 | 258 | 216.00 | 2400.00 | 2616.00 | 654.00 |
| 11 | 411 | ಕೊಡಗು | 10 | 88 | 98 | 120.00 | 880.00 | 1000.00 | 250.00 |
| 12 | 412 | ಮಂಡ್ಯ | 39 | 193 | 232 | 468.00 | 1930.00 | 2398.00 | 599.50 |
| 13 | 413 | ಬೆಳಗಾಂ | 164 | 322 | 486 | 1968.00 | 3220.00 | 5188.00 | 1297.00 |
| 14 | 414 | ಬಿಜಾಪುರ | 100 | 99 | 199 | 1200.00 | 990.00 | 2190.00 | 547.50 |
| 15 | 415 | ಧಾರವಾಡ | 23 | 104 | 127 | 276.00 | 1040.00 | 1316.00 | 329.00 |
| 16 | 416 | ಉತ್ತರ ಕನ್ನಡ | 20 | 187 | 207 | 240.00 | 1870.00 | 2110.00 | 527.50 |
| 17 | 417 | ಗುಲ್ಬರ್ಗಾ | 95 | 125 | 220 | 1140.00 | 1250.00 | 2390.00 | 597.50 |
| 18 | 418 | ಬಳ್ಳಾರಿ | 84 | 105 | 189 | 1008.00 | 1050.00 | 2058.00 | 514.50 |
| 19 | 419 | ಬೀದರ್ | 51 | 124 | 175 | 612.00 | 1240.00 | 1852.00 | 463.00 |
| 20 | 420 | ರಾಯಚೂರು | 99 | 66 | 165 | 1188.00 | 660.00 | 1848.00 | 462.00 |
| 21 | 421 | ಯಾದಗಿರಿ | 53 | 64 | 117 | 636.00 | 640.00 | 1276.00 | 319.00 |
| 22 | 451 | ದಾವಣಗೆರೆ | 28 | 202 | 230 | 336.00 | 2020.00 | 2356.00 | 589.00 |
| 23 | 452 | ರಾಮನಗರ | 17 | 113 | 130 | 204.00 | 1130.00 | 1334.00 | 333.50 |
| 24 | 453 | ಚಿಕ್ಕಬಳ್ಳಾಪುರ | 15 | 136 | 151 | 180.00 | 1360.00 | 1540.00 | 385.00 |
| 25 | 456 | ಚಾಮರಾಜನಗ | 27 | 93 | 120 | 324.00 | 930.00 | 1254.00 | 313.50 |
| 26 | 457 | ಉಡುಪಿ | 32 | 114 | 146 | 384.00 | 1140.00 | 1524.00 | 381.00 |
| 27 | 461 | ಬಾಗಲಕೋಟೆ | 68 | 93 | 161 | 816.00 | 930.00 | 1746.00 | 436.50 |
| 28 | 462 | ಗದಗ | 23 | 83 | 106 | 276.00 | 830.00 | 1106.00 | 276.50 |
| 29 | 463 | ಹಾವೇರಿ | 24 | 184 | 208 | 288.00 | 1840.00 | 2128.00 | 532.00 |
| 30 | 466 | ಕೊಪ್ಪಳ | 71 | 63 | 134 | 852.00 | 630.00 | 1482.00 | 370.50 |
| | | ಒಟ್ಟು | 1418 | 4211 | 5629 | 17016.00 | 42110.00 | 59126.00 | 14781.50 |

14/02/14

(ಎಲ್.ಸಿ.ಬಸವರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ